# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## MVC. No. 950 /2025

ಪಿ.ಡಬ್ಲ್ಯೂ. 2

ದಿನಾಂಕಃ **29.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಪಾಟೀ ಸವಾಲು 2 ನೇ ಎದುರುದಾರರ ಪರ ವಕೀಲರಿಂದ

ಡಿಸ್ ಚಾರ್ಜ್ ಸಮ್ಮರಿ ಪ್ರಕಾರ ಗಾಯಾಳುವನ್ನು ಪ್ರಥಮ ಪರೀಕ್ಷೆ ಮಾಡಿದ್ದೇನೆ. ಗಾಯಾಳು ನಮ್ಮ ಆಸ್ಪತ್ರೆಗೆ ಬಂದಾಗ ಕೊರಟಗೆರೆ ಆಸ್ಪತ್ರೆಗೆ ಸಂಬಂದಪಟ್ಟಂತೆ ಯಾವುದೇ ದಾಖಲೆಯನ್ನು ನಮಗೆ ಕೊಟ್ಟಿರುವುದಿಲ್ಲ. ಗಾಯಾಳು ದಿ.17.04.2025 ರಂದು ಸಂಪೂರ್ಣವಾಗಿ ಗುಣಮುಖವಾಗಿದ್ದರು ಎಂದರೆ ಸರಿ. ದಿ.17.04.2025 ರಿಂದ 06.06.2026 ರವರೆಗೆ ಗಾಯಾಳು ನಮ್ಮ ಬಳಿ ಅಂದಾಜು 10 ಸಲ ಚಿಕಿತ್ಸೆಗಾಗಿ ಬಂದಿದ್ದರು. ಅದಕ್ಕೆ ಸಂಬಂದಪಟ್ಟಂತೆ ದಾಖಲೆ ಇರುವುದಿಲ್ಲ, ಆದರೆ ಹೊರ ರೋಗಿಯಾಗಿ ಚಿಕಿತ್ಸೆ ಬಂದಿರುತ್ತಾರೆ ಎಂದು ಸಾಕ್ಷಿ ಹೇಳಿರುತ್ತಾರೆ. ಒಪಿಡಿ ಸ್ಲಿಪ್‌ಗಳನ್ನು ಇಲ್ಲಿ ಹಾಜರುಪಡಿಸಿರುವುದಿಲ್ಲ. ಅರ್ಜಿದಾರರಿಗೆ ಆದಂತಹ ಮೂಳೆ ಮುರಿತ ಮಾಲ್ ಯುನೈಟ್ ಆಗಿರುತ್ತದೆ. ನಮ್ಮ ಅಜಾಗರೂಕತೆಯಿಂದ ಅರ್ಜಿದಾರರಿಗೆ ಮಾಲ್ ಯುನೈಟ್ ಆಗಿರುತ್ತದೆ ಎಂದರೆ ಸರಿಯಲ್ಲ, ಎಲ್ಲಾ ಎಕ್ಸರೇಗಳನ್ನು ಹಾಜರುಪಡಿಸಿರುತ್ತೇನೆ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ವರದಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ribs fracture ಗೆ ಅಂಗನ್ಯೂನತೆ ಬರುವುದಿಲ್ಲ ಎಂದರೆ ಸರಿ. ಅರ್ಜಿದಾರರು ಏನು ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ನಾನು ವಿಚಾರ ಮಾಡಿದ್ದೇನೆ. ಅರ್ಜಿದಾರರಿಗೆ ದೈನಂದಿಕ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. Radiologist

opinion ನ್ನು ಕೊಟ್ಟಿರುತ್ತೇನೆ. ಶೇ 47 ರಷ್ಟು ಅರ್ಜಿದಾರರಿಗೆ upper limb ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ದೇಹಕ್ಕೆ ಶೇ 15 ರಷ್ಟು ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೇಂದ್ರ ಸರ್ಕಾರದ ಗೈಡ್ ಲೈನ್ಸ್ ಪ್ರಕಾರ ಅಂಗನ್ಯೂನತೆ ಸರ್ಟಿಫಿಕೇಟ್ ನ್ನು ಕೊಟ್ಟಿರುತ್ತೇನೆ. Arm component ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಹೆಚ್ಚಿನ ಪರಿಹಾರವನ್ನು ಕೊಡಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

**2** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು